**ಟೀಚರ್:** ಭೂಮಿ ಮತ್ತು ಚಂದ್ರನ ನಡುವೆ ಎಷ್ಟು ದೂರ ಇದೆ?
**ಗುಂಡ:** ಬರೀ ಎರಡು ಕಿಲೋ ಮೀಟರ್. ಭೂಮಿ ರಾಜಾಜಿನಗರದಲ್ಲಿದ್ದರೆ, ಚಂದ್ರ ಮಲ್ಲೇಶ್ವರಂನಲ್ಲಿ ಇರ್ತಾನೆ ಮೇಡಂ.

**ಹೆಂಡತಿ:** ಡಾಕ್ಟರ್ ಹತ್ರ ಹೋಗಿದ್ರಾ?
**ಗಂಡ:** ಏನಿಲ್ಲ, ಔಷಧಿ ಕೊಟ್ಟಿದ್ದಾರೆ.
**ಹೆಂಡತಿ:** ನಿಮ್ಮ ಸಮಸ್ಯೆಗಳನ್ನೆಲ್ಲ ಹೇಳಿದ್ರಿ ತಾನೆ?
**ಗಂಡ:** ಇಲ್ಲ, ನಿನ್ನ ಬಗ್ಗೆ ಏನೂ ಹೇಳಿಲ್ಲ.

**ಟೀಚರ್:** ಎವರೆಸ್ಟ್ ಶಿಖರದ ಎತ್ತರ ಎಷ್ಟು?
**ಚಿಂಟು:** ಐದು ಸೆಂಟಿ ಮೀಟರ್ ಟೀಚರ್.
**ಟೀಚರ್:** ತಪ್ಪು ಉತ್ತರ.
**ಚಿಂಟು:** ಇಲ್ಲ ಟೀಚರ್ ನಾನು ನನ್ನ ಪುಸ್ತಕದಲ್ಲಿ ಇರುವ ಎವರೆಸ್ಟ್ ಶಿಖರದ ಚಿತ್ರವನ್ನು ಸ್ಕೇಲ್‌ನಿಂದ ಅಳೆದಿದ್ದೇನೆ.

ಕಳ್ಳತನ ಮಾಡುವುದೇ ವೃತ್ತಿ ಮಾಡಿಕೊಂಡಿದ್ದ ಕಳ್ಳನಿಗೆ ಅವನ ಹೆಂಡತಿ ಹೀಗೆ ಕೇಳಿದಳು.
**ಹೆಂಡತಿ:** ಬೀರುವಿನಲ್ಲಿ ಇಟ್ಟಿದ್ದ ನನ್ನ ಚಿನ್ನದ ಬಳೆಗಳು, ಚಿನ್ನದ ಸರ ಕಾಣ್ತಾ ಇಲ್ಲ, ನೀವೇನಾದ್ರೂ 'ವರ್ಕ್ ಫ್ರಂ ಹೋಂ' ಮಾಡಿದ್ರಾ?







**ಮಗ:** ಅಪ್ಪ, ನಾಳೆ ನಾನು ನಾಟಕದಲ್ಲಿ ಗಂಡನ ಪಾತ್ರ ಮಾಡುತ್ತಿದ್ದೇನೆ.
**ಅಪ್ಪ:** ಯಾಕೋ ಗೂಬೆ, ಬೇರೆ ಪಾತ್ರ ಸಿಗಲಿಲ್ಲವೇ?
**ಮಗ:** ಅದೇ ತುಂಬ ಸುಲಭದ ಪಾತ್ರ ಅಪ್ಪ. ಯಾವುದೇ ಡೈಲಾಗ್ಸ್ ಹೇಳೋ ಅಗತ್ಯವೇ ಇಲ್ಲ ಈ ಪಾತ್ರದಲ್ಲಿ.

**ತಿಮ್ಮ:** ಭಾರತದ ಅತಿ ದೊಡ್ಡ ಸುಳ್ಳು ಯಾವುದು?
**ಗುಂಡ:** ಕಾನೂನು ಎಲ್ಲರಿಗೂ ಒಂದೇ ಅಂತ ಹೇಳುವುದು.







**ದೇವರು:** ನಿನ್ನ ಸಾವು ಹತ್ತಿರವಾಗಿದೆ. ಕೊನೆ ಆಸೆ ಏನಾದರೂ ಇದ್ದರೆ ಹೇಳು.
**ಕುಡುಕ:** ಮುಂದಿನ ಜನ್ಮದಲ್ಲಿ ನನಗೆ ಒಂದೇ ಒಂದು ಹಲ್ಲು ಕೊಟ್ಟು, 32 ಲಿವರ್ ಕೊಟ್ಟುಬಿಡು.

**ಪಿಂಕಿ:** ಯಾಕೆ ನೀವು ಎಲ್ಲಾ ಹುಡುಗರು ಒಂದೇ ತರಹ?
**ವಿಕ್ಕಿ:** ಏಕೆಂದರೆ ನಾವು ಹುಡುಗರು ಮೇಕಪ್ ಮಾಡಿಕೊಳ್ಳುವುದಿಲ್ಲ ಅದಕ್ಕೆ.

**ಮಗ:** ಅಪ್ಪ ನಿಮಗೆ ಒಂದು ಕೋಟಿ ಲಾಟರಿ ಹೊಡೆಯುತ್ತೆ, ಅವತ್ತೆ ಮಮ್ಮಿ ಕಿಡ್ನಾಪ್ ಆಗಿಬಿಟ್ರೆ ಏನ್ ಮಾಡ್ತೀರಿ?
**ಅಪ್ಪ:** ಸಾಧ್ಯಾನೇ ಇಲ್ಲ, ಒಂದೇ ದಿನಕ್ಕೆ ಎರಡೆರಡು ಲಾಟರಿ ಹೊಡೆಯಲ್ಲ ಮಗನೆ!

ಗುಂಡ ಹೊಸದಾಗಿ ಅತ್ತೆ ಮನೆಗೆ ಬಂದ... ಅತ್ತೆ ವಾರ ಪೂರ್ತಿ ಸೌತೆಕಾಯಿ ಪಲ್ಯ, ಸೌತೆಕಾಯಿ ಗೊಜ್ಜು, ಸೌತೆಕಾಯಿ ದೋಸೆ, ಸೌತೆಕಾಯಿ ಪಚಡಿ ಮಾಡಿದಳು. ಎಂಟನೆಯ ದಿನ ಅತ್ತೆ, 'ಅಳಿಯಂದ್ರೆ ಇವತ್ತು ಏನು ಅಡುಗೆ ಮಾಡಲಿ' ಎಂದಳು. ಅದಕ್ಕೆ ಗುಂಡ, 'ಆ ತೊಂದರೆ ತಗೋಬೇಡಿ ಅತ್ತೆ. ಸೌತೆಕಾಯಿ ತೋಟ ತೋರಿಸಿ ಅಲ್ಲೇ ಮೇಯ್ದು ಬರ್ತೀನಿ' ಎಂದ.

ಸಂಗ್ರಹ: ಶರದ ಕುಲಕರ್ಣಿ, ಬೀದರ್